ಕಾವ್ಯ ಮತ್ತು ಸಾಹಿತ್ಯದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ಹಾಗಾಗಿಯೇ ನನ್ನೆಲ್ಲಾ ಸಿನಿಮಾಗಳಿಗೆ ಪಾಸಿಟಿವ್ ಅಪ್ರೋಚ್ ಇದೆ. ನನ್ನ ಸಿನಿಮಾಗಳಲ್ಲಿ ಜೀವದ ಅನುಸಂಧಾನ ಭದ್ರವಾಗಿ ಮೂಡಿಬರಲು ಕವಿಹೃದಯಗಳೇ ಕಾರಣ. ವ್ಯಾಸನಂತೂ ನನ್ನ ಸಿನಿಮಾಗಳ ಆತ್ಮದಂತೆ ಕೆಲಸ ಮಾಡಿದ್ದಾನೆ. ಸಮಾಜಕ್ಕೆ ಕೊಡುಗೆ ಕೊಟ್ಟು, ಏನನ್ನೂ ಬಯಸದೇ ಕೊಡುವುದರಲ್ಲಿಯೇ ಸುಖ ಪಟ್ಟವ ನಮ್ಮ ವ್ಯಾಸ.

ವೈಯಕ್ತಿಕವಾಗಿ ಎಂದಿಗೂ ವ್ಯಾಸ ಏನನ್ನೂ ಹೇಳಿಕೊಂಡವನಲ್ಲ. ನಾನು ಅವನ ಹೆಂಡತಿ ಸಾವಿತ್ರಿ ಅವರಿಗೆ, 'ಏನ್ರಿ ಇವನು ಸದಾ ನಗ್ತಾನೇ ಇರ್ತಾನಲ್ರೀ' ಅಂತ ಕೇಳಿದ್ರೆ ಅವರು ಅಷ್ಟೇ ನಗುಮೊಗದಿಂದ ಅವರ ಇರೋದೇ ಹಾಗೆ ಅನ್ನುತ್ತಿದ್ದರು. ವ್ಯಾಸನದು ಸುಖೀ ಕುಟುಂಬ. ತಮಾಷೆಯೆಂದರೆ ವ್ಯಾಸ ನಿವೃತ್ತಿಯಾದ ಮೇಲೆ ಮನೆಯ ಇನ್‌ಚಾರ್ಜ್ ಆಗಿಬಿಟ್ಟಿದ್ದ. ಮನೆಗೇ ಬಾರೋ ಅಂತ ಕರೆಯುತ್ತಿದ್ದ. ಆಗೆಲ್ಲಾ ಅವನ ಮನೆಯಲ್ಲೇ ನನ್ನ ಠಿಕಾಣಿ. ಅವನಿಗೆ ಅಡುಗೆ ಮಾಡೋದು ತುಂಬಾ ಇಷ್ಟದ ಕೆಲಸವಾಗಿತ್ತು. ಏನೋನು ಮಾಡಿ ಇದನ್ನು ತಿನ್ನೋ ಚೆನ್ನಾಗಿದೆ ಅಂತ ಅಡುಗೆ ಮಾಡಿ ಬಡಿಸುತ್ತಿದ್ದ. ನಿತ್ಯವೂ ಅವನ ಮನೆಯಿಂದ ನಮ್ಮನೆಗೆ ವಾಕಿಂಗ್ ಬರುತ್ತಿದ್ದ. ಅವನನ್ನ ಬಿಟ್ಟುಬರಲು ನಾನು ಅವನ ಮನೆ ಹತ್ತಿರ ಹೋಗುತ್ತಿದ್ದೆ.

ಅಷ್ಟೊಂದು ಆತ್ಮೀಯನಾಗಿದ್ದವನು ಈಗಿಲ್ಲ ಅಂದರೆ ನನ್ನಲ್ಲಿ ಒಂದು ರೀತಿಯ ಖಾಲಿತನ ಆವರಿಸಿಬಿಟ್ಟಿದೆ. ಒಂದು ರೂಪಕ್ಕೆ ಹಲವು ಪ್ರತಿರೂಪಗಳು ಕೆಲಸ ಮಾಡುತ್ತಿರುತ್ತವೆಯಂತೆ. ಅಂಥ ಪ್ರತಿರೂಪಗಳಲ್ಲಿ ವ್ಯಾಸ ಇದ್ದ. ನಾನು ಹೀಗೆ ಆಗಿದ್ದೇನೆ ಅಂದರೆ ಅದಕ್ಕೆ ಬಿ.ವಿ. ಕಾರಂತ, ಪ್ರೇಮಾ ಕಾರಂತ, ಅಶ್ವತ್ಥ, ವ್ಯಾಸ ಅವರಂಥ ಪ್ರತಿರೂಪಗಳೇ ಕಾರಣ. ಒಂದೊಂದೇ ಪ್ರತಿರೂಪ ಖಾಲಿಯಾಗುತ್ತಿದ್ದಂತೆ ಅದನ್ನು ಬೇರೆ ಯಾವ ರೂಪವೂ ತುಂಬಲಾಗದು. ಅಲ್ಲೊಂದು ಶೂನ್ಯ ಆವರಿಸುತ್ತದೆ.

ದೇವರ ಕೊಟ್ಟ ಬಹುದೊಡ್ಡ ವರ ಮರೆವು ಅಂತಾರೆ. ಆದರೆ, ಅದೇ ದೇವರು ನೆನಪನ್ನೂ ಕೊಟ್ಟಿದ್ದಾನಲ್ಲ!

**ನಿರೂಪಣೆ: ಮಂಜುಶ್ರೀ ಕಡಕೋಳ**

## ಟಿ ಎಸ್ ನಾಗಾಭರಣ

ಕನ್ನಡ ಸಿನಿಮಾ ಜಗತ್ತಿನ ಪ್ರಮುಖ ಹೆಸರು ಟಿ.ಎಸ್. ನಾಗಾಭರಣ. ಟಿ. ನರಸೀಪುರ ತಾಲ್ಲೂಕಿನ ತಲಕಾಡಿನವರಾದ ನಾಗಾಭರಣ, ಪ್ರಾಥಮಿಕ ವಿದ್ಯಾಭ್ಯಾಸವನ್ನು ತಲಕಾಡಿನಲ್ಲಿ ಪಡೆದರು. ಅವರ ಮುಂದಿನ ಓದು ಬೆಂಗಳೂರಿನಲ್ಲಿ ಆಯಿತು.

ಸಹ ನಿರ್ದೇಶಕರಾಗಿ ದುಡಿದ ಮೊದಲ ಚಿತ್ರ 'ಕಾಡು'. 'ಗ್ರಹಣ', 'ಮೈಸೂರ ಮಲ್ಲಿಗೆ', 'ಸಂತ ಶಿಶುನಾಳ ಶರೀಫ', 'ಚಿನ್ನಾರಿಮುತ್ತ', 'ಜನುಮದ ಜೋಡಿ', 'ನಾಗಮಂಡಲ', 'ಚಿಗುರಿದ ಕನಸು' ಅವರ ನಿರ್ದೇಶನದ ಮುಖ್ಯ ಸಿನಿಮಾಗಳಾಗಿವೆ.